**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**MVC NO. 830/2021.**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ. ಯೋಗಿತಾ ಹೆಚ್ ಆರ್ | ***P.W-3*** |
| ಗಂಡನ ಹೆಸರು | : ಪೃಥ್ವಿ | |
| ವಯಸ್ಸು | : 40 ವರ್ಷ | |
| ಉದ್ಯೋಗ | : ಚರ್ಮ ರೋಗ ತಜ್ಞರು,ಹೊನ್ನಾಳಿ ಸರ್ಕಾರಿ ಆಸ್ಪತ್ರೆ . | |
| ವಾಸ | : ಹೊನ್ನಾಳಿ . | |

**ದಿನಾಂಕಃ 19-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ**

1. ನಾನು ಆಗಸ್ಟ 2017 ರಿಂದ ಇಲ್ಲಿಯವರೆಗೂ ಹೊನ್ನಳಿ ಆಸ್ಪತ್ರೆ ಯಲ್ಲಿ ಚರ್ಮ ರೋಗ ತಜ್ಞೆಯಾಗಿ ಕೆಲಸ ಮಾಡುತ್ತಿದ್ದೇನೆ.

ದಿಃ 22-02-2024 ರಂದು ಅಪಘಾತದಲ್ಲಿ ಶಾಂತಪ್ಪ ತಂದೆ ದೊಡ್ಡಪ್ಪ ಸೊರಟೂರು ಅವರು ಮೃತ ಪಟ್ಟಿದ್ದು, ಅವರ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ನಮ್ಮ ಆಸ್ಪತ್ರೆಗೆ ತರಲಾಗಿತ್ತು. ಸದರಿಯವರಿಗೆ ದಿಃ 12-02-2020 ರಂದು ಸುಮಾರು ಸಂಜೆ 6.30 ಗಂಟೆಗೆ ತುಗ್ಗಲಹಳ್ಳಿ ಕ್ರಾಸ್ ಹತ್ತಿರ ಅಪಘಾತ ಆಗಿ ಗಾಯಗೊಂಡು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ಗುಣಮುಖ ಆಗದೇ ಮರಣ ಹೊಂದಿರುತ್ತಾರೆ ಎಂದು ಮಾಹಿತಿ ನೀಡಿರುತ್ತಾರೆ. ನಂತರ ಮೃತ ದೇಹದ ಮರಣೋತ್ತರ ಪರೀಕ್ಷೆ ಮಾಡಿರುತ್ತೇನೆ. ಆ ಬಗ್ಗೆ ನಿಪಿ-11 ರಂತೆ ಪಿ ಎಂ ವರದಿಯನ್ನು ನೀಡಿರುತ್ತೇನೆ. ನಿಪಿ-11 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ನನ್ನ ಅಭಿಪ್ರಾಯದಲ್ಲಿ ಮೃತನ ಸಾವು ಸೆಪ್ಟಿಸಿಮಿಯಾ ದಿಂದ ಆಗಿರುತ್ತದೆ. ಮೃತನ ಮೆದುಳಿನಲ್ಲಿ ಆಪರೇಶನ ಮಾಡಿದ್ದು ಮೆದುಳು ಕೆಲಸ ಮಾಡದೆ ಬಹು ಅಂಗಾಂಗ ವೈಫಲ್ಯದಿಂದ ಮರಣ ಹೊಂದಿರುತ್ತಾರೆ. ಅಪಘಾತದಲ್ಲಿ ತಲೆಗೆ ಆದ ಗಾಯದಿಂದಲೇ ಮೃತ ಶಾಂತಪ್ಪ ಮರಣ ಹೊಂದಿರುತ್ತಾರೆ. ಮೃತನ ದೇಹವನ್ನು ಪರೀಕ್ಷೆ ಮಾಡಿದಾಗ ಮೃತನ ಗಂಟಲಿನಲ್ಲಿ ರಂಧ್ರ ಮಾಡಿರುವುದು ಕಂಡು ಬಂದಿರುತ್ತದೆ ಹಾಗೂ

ಮೂಗಿನಲ್ಲಿ ಪೈಪ್ ಹಾಕಿದ್ದು ಕಂಡು ಬಂದಿರುತ್ತದೆ ಅಲ್ಲದೆ ತಲೆಯ ಸ್ಕಲ್ ತೆಗೆದು ಅಪರೇಶನ ಮಾಡಿರುವುದು ಕಂಡು ಬಂದಿರುತ್ತದೆ. ಮೃತನ ದೇಹ ಬಹಳ ಕೃಷ ಕಾಯವಾಗಿತ್ತು.

**ಪಾಟೀ ಸವಾಲುಃ** 1 ನೇ ಎದುರುದಾರರ ಪರ ವಕೀಲರನ್ನು ಪದೇ-ಪದೇ ಕೂಗಿ ಕರೆಯಿಸಲಾಗಿ, ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು .

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಾದ ಶ್ರೀ.ಪಿ.ಎಸ್.ಹೆಚ್ ವಕೀಲರಿಂದಃ**

1. ಅಪಘಾತ ಆದ ತಕ್ಷಣ ನಾನು ಮೃತನಿಗೆ ಯಾವುದೆ ಚಿಕಿತ್ಸೆ ಕೊಟ್ಟಿರುವುದಿಲ್ಲ ಮತ್ತು ಆತನನ್ನು ನೋಡಿರುವುದಿಲ್ಲ. ದಿಃ 12-12-2020 ರಿಂದ 22-02-2024 ರವರೆಗೆ ನಾನು ಮೃತನಿಗೆ ಯಾವುದೆ ಚಿಕಿತ್ಸೆ ನೀಡಿರುವುದಿಲ್ಲ. ಪಿ ಎಂ ವರದಿ ಕೊಡುವ ಪೂರ್ವದಲ್ಲಿ ಮೃತ ಚಿಕಿತ್ಸೆ ಪಡೆದ ಎಲ್ಲಾ ಆಸ್ಪತ್ರೆಗಳಿಂದ ದಾಖಲೆ ತರಿಸಿ ನಾನು ನೋಡಿರುತ್ತೇನೆ. ಅಪಘಾತ ಆದ ದಿನದಿಂದ ಮರಣ ಹೊಂದುವವರೆಗೆ ನಿರಂತರವಾಗಿ ಚಿಕಿತ್ಸೆ ಪಡೆದ ಬಗ್ಗೆ ಮೃತನ ವಾರಸುದಾರರು ದಾಖಲೆಗಳನ್ನು ಕೊಟ್ಟಿದ್ದರು ನಾನು ಅವುಗಳನ್ನು ಪರೀಶೀಲಿಸಿರುತ್ತೇನೆ. ಮೃತನಿಗೆ ಯಾವುದೆ ಅಪಘಾತದಿಂದ ಗಾಯ ಆಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-13 ಡಿಸ್ಚಾರ್ಜ ಸಮರಿಯಲ್ಲಿ ಹೇಳಿರುವ ಗಾಯಗಳಿಂದ ಆತ ಮರಣ ಹೊಂದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಗಾಯದಿಂದ ಮರಣ ಸಂಭವಿಸುವ ಸಾಧ್ಯತೆ ಇದೆ ಎಂದು ಹೇಳುತ್ತಾರೆ. ನಾನು ಹೇಳಿದ ಪ್ರಕಾರ ಗಾಯದಿಂದಲೆ ಮರಣ ಹೊಂದಿದ್ದಾಗಿದ್ದರೆ ಸ್ಥಳದಲ್ಲಿಯೆ ಮೃತ ಪಡಬೇಕಾಗಿತ್ತು ಎಂದರೆ ಸರಿಯಲ್ಲ. ಮೃತನಿಗೆ ಬೇರೆ ಯಾವುದಾದರೂ ಕಾಯಿಲೆಗಳು ಇದ್ದವು ಎಂದು ಅವರ ವಾರಸುದಾರರನ್ನು ಕೇಳಿರುವುದಿಲ್ಲ. ನಾನು ಸರಿಯಾದ ಪಿ ಎಂ ವರದಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅನುಕೂಲವಾಗಲಿ ಎಂದು ಸುಳ್ಳು ಪಿ ಎಂ ವರದಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

2. ಕೊನೆಯ ಬಾರಿಗೆ ಚಿಕಿತ್ಸೆ ಪಡೆದ ಆಸ್ಪತ್ರೆಯಲ್ಲಿಯೆ ಪಿ ಎಂ ಮಾಡಿಸಿ ಎಂದು ನಾನು ಅವರಿಗೆ ಹೇಳಿರುವುದಿಲ್ಲ. ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಡಿಸ್ಚಾರ್ಜ ಮಾಡಿಕೊಂಡು ಬಂದು ಮನೆಯಲ್ಲಿ ಇದ್ದಾಗ ಮರಣ ಹೊಂದಿರುತ್ತಾರೆ ಎಂದು ಅವರ ವಾರಸುದಾರರು ಹೇಳಿರುತ್ತಾರೆ. ಮೃತನ ವಯಸ್ಸು ಎಷ್ಟಾಗಿದೆ ಎಂದು ದಾಖಲೆ ನೋಡಿ ನಾನು ಪರೀಶಿಲಿಸಿರುವುದಿಲ್ಲ. ಆ ವ್ಯಕ್ತಿಯನ್ನು ನೋಡಿ ಅಂದಾಜು ವಯಸ್ಸು ಬರೆದಿರುತ್ತೇನೆ. ಮೃತ ಶಾಂತಪ್ಪ ಅಪಘಾತದಿಂದಾದ ಗಾಯದಿಂದ ಮರಣ ಹೊಂದಿರದೆ ಬೇರೆ ಕಾಯಿಲೆಯಿಂದ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.